ಇಂತಹವರ ಮೇಲೆ 643 ಪ್ರಕರಣಗಳನ್ನು ಕರ್ನಾಟಕ ಪೋಲೀಸ್ ಕಾಯ್ದೆ ಕಲಂ 92 (ಜ) ಪ್ರಕಾರ ದಾಖಲು ಮಾಡಿರುತ್ತದೆ. ಪ್ರಸಕ್ತ ವರ್ಷದಲ್ಲಿ 31-1-96 ರವರಗೆ 150 ಪ್ರಕರಣಗಳನ್ನು ದಾಖಲು ಮಾಡಿರುತ್ತದೆ.

ಪುಟಪಾತ್ ವ್ಯಾಪಾರಿಗಳು ತಮ್ಮ ವಹಿವಾಟನ್ನು ಹೆಚ್ಚು ಮಾಡಿದ್ದು ಬೆಂಗಳೂರು ಮಹಾನಗರ ಪಾಲಿಕೆಯವರು ಹಾಕಿಂಗ್ ಮತ್ತು ನಾನ್ ಹಾಕಿಂಗ್ ಸ್ಥಳಗಳನ್ನು ಗುರುತು ಮಾಡಿ ದಿ: 8-10-93 ರಂದು ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಈ ಆದೇಶದ ಪ್ರಕಾರ ಅಕ್ರಮವಾಗಿ ಇಟ್ಟುಕೊಂಡು ಎಲ್ಲಾ ಪುಟಪಾತ್ ಅಂಗಡಿಗಳನ್ನು ತೆರವು ಮಾಡಿಸಲಾಯಿತು.

ಈಗ ಕೆ.ಜಿ.ರಸ್ತೆ ಟ್ಯಾಂಕಬಂಡ್ ರಸ್ತೆ, ಸಂಗಮ್ ಚಿತ್ರಮಂದಿರದ ಪಕ್ಕದ ರಸ್ತೆ, ಎಸ್.ಪಿ. ರಸ್ತೆ ಮತ್ತು ತ್ರಿಭುವನ್ ಚಿತ್ರಮಂದಿರದ ಎದುರಿಗೆ ಇರುವ ರಸ್ತೆಗಳಲ್ಲಿ ಪುಟಪಾತ್ ಮೇಲೆ ವ್ಯಾಪಾರ ಮಾಡುವವರು ಅವರುಗಳನ್ನು ತೆರವುಮಾಡಿಸದಂತೆ ಮಾನ್ಯ ಉಚ್ಚನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತಂದಿರುತ್ತಾರೆ.

ಆದರೂ ಸಹ ಅವರು ಪುಟಪಾತ್ ಒಟ್ಟು ರಸ್ತೆಯ ಮೇಲೆ ವ್ಯಾಪಾರ ಮಾಡುತ್ತಾ ಸಾರ್ವಜನಿಕ ಓಡಾಟಕ್ಕೆ ಹಾಗೂ ವಾಹನ ಸಂಚಾರಕ್ಕೆ ಅಡ್ಡಿ ಮಾಡದೆ ಇರುವ ತರಹ ನೋಡಿಕೊಳ್ಳಲಾಗುತ್ತಿದೆ.

೫) ಕಾಲುದಾರಿಗಳ ಮೇಲೆ ಮತ್ತು ರಸ್ತೆ ಪಕ್ಕದಲ್ಲಿ ವ್ಯಾಪಾರ ಮಾಡುತ್ತಾ ಸಂಚಾರ ಮತ್ತು ಪಾದಚಾರಿಗಳ ಸುಗಮ ಸಂಚಾರಕ್ಕೆ ಅಡಚಣೆ ಉಂಟು ಮಾಡಿದ ಪಾದಚಾರಿ ವ್ಯಾಪಾರಗಳ ಮೇಲೆ ಕರ್ನಾಟಕ ಪೋಲೀಸ್ ಕಾಯ್ದೆ 1963ರ ಪ್ರಕಾರ 1995ರ ಪ್ರಕರಣ ದಾಖಲು ಮಾಡಿಕೊಂಡು ಕ್ರಮ ಜರುಗಿಸಲಾಗಿದೆ.

ಪ್ರದೇಶ ಹೆಸರು	1995	1996
ಉಪ್ಪಾರಪೇಟೆ	64	15
ಚಿಕ್ಕಪೇಟೆ	269	28
ಇತರೆ ಪ್ರದೇಶಗಳು	4598	77

ಸಾರ್ವಜನಿಕರ ಆರೋಗ್ಯಕ್ಕೆ ದಕ್ಕೆ ಉಂಟು ಮಾಡುವ ವ್ಯಾಪಾರಸ್ಥರ ಮೇಲೆ ಬೆಂಗಳೂರು ಮಹಾನಗರ ಪಾಲಿಕೆಯವರು ಮತ್ತು ಪೋಲೀಸರು ಕ್ರಮ ಕೈಗೊಳ್ಳುತ್ತಾರೆ.

ಮುಖ್ಯಮಂತ್ರಿಗಳ ಪರಿಹಾರ ನಿಧಿ ವಿತರಿಸಲಾದ ಹಣ

697 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧) ಕಳೆದ ಐದು ವರ್ಷಗಳಿಂದ ಮುಖ್ಯಮಂತ್ರಿಗಳು "ಮುಖ್ಯಮಂತ್ರಿಗಳ ಪರಿಹಾರ ನಿಧಿ" ಯಿಂದ ವಿತರಿಸಿರುವ ಪರಿಹಾರ ನಿಧಿ ಎಷ್ಟು?

2) ಕಲವು ವಿಧಾನಸಭಾ ಕ್ಷೇತ್ರಗಳಿಂದ ಬಹಳಷ್ಟು ಅರ್ಜಿಗಳು ಬಂದಿದ್ದು ನಿರ್ಲಕ್ಷಿಸಿರುವ ಕಾರಣಗಳೇನು ?

3) ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ ಈಗ ಇರುವ ಹಣವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಯವರು) :

1) ದಿನಾಂಕ :1-1-1995ರಿಂದ 31-1-1995ರ ವರಗೆ ರೂ 1,08,79,310-00 (ಒಂದು ಕೋಟಿ ಎಂಟು ಲಕ್ಷ ಎಪ್ಪತ್ತೊಂಬತ್ತು ಸಾವಿರದ ಮೂರು ನೂರಾ ಹತ್ತು ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

(ವಿವರಗಳನ್ನು ಅನುಬಂಧ -1 ಮತ್ತು 2ರಲ್ಲಿ ನೀಡಲಾಗಿದೆ)

2) ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಧನ ಸಹಾಯ ಕೋರಿ ಹೆಚ್ಚಿನ ಸಂಖ್ಯೆಯಲ್ಲಿ ಮನವಿಗಳು ಬರುತ್ತಿದ್ದು, ಇವುಗಳಲ್ಲಿ ಪ್ರಮುಖವಾಗಿ ಕ್ಯಾನ್ಸರ್, ಕಿಡ್ನಿ ಮತ್ತು ಹೃದಯ ಶಸ್ತ್ರ ಚಿಕಿತ್ಸೆಗೆ ಆಸ್ಪತ್ರೆಗಳ ದಾಖಲಾತಿಗಳನ್ನು ಪರಿಶೀಲಿಸಿ ಧನ ಸಹಾಯ ನೀಡಲಾಗುತ್ತಿದೆ. ಹೆಚ್ಚಿನ ಅರ್ಜಿಗಳಲ್ಲಿ ಕಾಯಿಲೆಗೆ ಸಂಬಂಧಿಸಿದ ಪುಷ್ಠಕರಿಸುವ ದಾಖಲೆಗಳಿಲ್ಲದೆ ಕಾರಣ ಪರಿಗಣಿಸರಾಗಿರುವುದಿಲ್ಲ. ಜೊತೆಗೆ ಪರಿಹಾರ ನಿಧಿಯಲ್ಲಿ ಹಣದ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಮಂಜೂರಾತಿ ಮಾಡಲಾಗುತ್ತಿದೆ.

3) ರೂ. 55,00,227.59 (ಐವತ್ತೈದು ಲಕ್ಷ ಎರಡುನೂರು ಇಪ್ಪತ್ತೇಳು ರೂಪಾಯಿ ಐವತ್ತೊಂಬತ್ತು ಪೈಸಗಳು ಮಾತ್ರ) (ದಿನಾಂಕ 31-01-1996ರಲ್ಲಿದ್ದಂತೆ)

ಅನುಬಂಧ 1

ಮಾನ್ಯ "ಮುಖ್ಯಮಂತ್ರಿಯವರ ಪರಿಹಾರ ನಿಧಿ" ಯಿಂದ ನೀಡಲಾಗಿರುವ ಹಣದ ಜಿಲ್ಲಾವಾರು ವಿವರ (ದಿನಾಂಕ 1-1-95 ರಿಂದ 31-1-95 ರವರೆಗೆ)

ಕ್ರಮ ಸಂಖ್ಯೆ	ಜಿಲ್ಲೆ	ಫಲಾನುಭವಿಗಳ ಸಂಖ್ಯೆ	ಪರಿಹಾರದ ಮೊತ್ತ (ರೂ.ಗಳಲ್ಲಿ)
1	2	3	4
1.	ಬೆಂಗಳೂರು (ಗ್ರಾಮಾಂತರ ಮತ್ತು ನಗರ ಜಿಲ್ಲೆ)	639	33,07,450-00
2.	ಬೆಳಗಾಂವ	48	2,94,00-00
3.	ಬಳ್ಳಾರಿ	35	2,21,000-00
4.	ಬೀದರ್	12	83,000-00
5.	ಬಿಜಾಪುರ	34	2,00,000,-00
6.	ಚಿಕ್ಕಮಗಳೂರು	83	3,79,500-00
7.	ಚಿತ್ರದುರ್ಗ	35	2,01,500-00
8.	ದಕ್ಷಿಣ ಕನ್ನಡ	334	6,21,950-00
9.	ಧಾರವಾಡ	71	3,16,900-00
10.	ಗುಲ್ಬರ್ಗಾ	44	1,97,200-00
11.	ಹಾಸನ	205	16,44,500-00
12.	ಕೊಡಗು	14	58,000-00
13.	ಕೋಲಾರ	68	3,80,000-00
14.	ಮಂಡ್ಯ	103	5,66,000-00
15.	ಮೈಸೂರು	164	8,12,200-00
16.	ರಾಯಚೂರು	32	1,67,000-00
17.	ಶಿವಮೊಗ್ಗ	108	5,05,000-00
18.	ತುಮಕೂರು	104	5,26,500-00
19.	ಉತ್ತರ ಕನ್ನಡ	51	2,35,700-00
20.	ಇತರೆ ರಾಜ್ಯಗಳು	31	1,61,910-00
	ಒಟ್ಟು	**2016**	**1,08,79,310-00**

ಅನುಬಂಧ - 2

ಪ್ರಕರಣವಾರು ವಿವರಗಳು

(ದಿನಾಂಕ 1-1-1995 ರಿಂದ 31-12-1995ರವರೆಗೆ)

ಖಾಯಿಲೆ ಸಂಖ್ಯೆ	ಫಲಾನುಭವಿಗಳ ಮೊತ್ತ (ರೂ.)	ಪಿತರಿಸಲಾದ ಪರಿಹಾರಧನದ ಮೊತ್ತ (ರೂ.)
ಕ್ಯಾನ್ಸರ್ ಖಾಯಿಲೆ	479	24,23,500-00
ಹೃದಯದ ಖಾಯಿಲೆ	600	36,45,700-00
ಮೂತ್ರಪಿಂಡ ಖಾಯಿಲೆ	148	8,90,000-00
ಇತರ ಪ್ರಕರಣಗಳು	789	39,20,110-00
	2,016	**1,08,79,310-00**